ಓ.ಎಸ್.ನಂ.35/2015

ಪಿ.ಡಬ್ಲ್ಯು:1

**ದಿನಾಂಕಃ22.03.2021 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

<u>**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಎಂ.ಎಂ. ವಕೀಲರಿಂದಃ**</u>

ಪ್ರತಿವಾದಿಯು ಅಗ್ರಿಮೆಂಟ್ ಮುಖಾಂತರ ನಮಗೆ ಜಮೀನು ನೀಡಿರುವ ವಿಚಾರವಾಗಿ ಈ ದಾವೆಯನ್ನು ದಾಖಲು ಮಾಡಿರುತ್ತೇನೆ. ನಾನು 5 ನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿದ್ದೇನೆ. ನಿಪಿ-1 ದಾಖಲೆಯ ತಲೆಬರಹ ಪ್ರಮಾಣ ಪತ್ರದ ದೃಢೀಕರಣ ನಮೂದು ಇರುತ್ತದೆ. ನಿಪಿ-1 ರ ಪ್ರಮಾಣಪತ್ರವನ್ನು ನಾನು ಮತ್ತು ಪ್ರತಿವಾದಿ ಇಬ್ಬರೂ ಸೇರಿ 1984 ನೇ ಸಾಲಿನಲ್ಲಿ ಬೆರಳಚ್ಚು ಮಾಡಿಸಿರುತ್ತೇವೆ. ನಿಪಿ-1 ಪ್ರಮಾಣಪತ್ರವನ್ನು ಹೊರತುಪಡಿಸಿ ಬೇರೆ ಯಾವುದೇ ಕರಾರು ಪತ್ರ ಆಗಿರುವುದಿಲ್ಲ ಅಂದರೆ ಸರಿ. ನಿಪಿ-1 ರಲ್ಲಿ ಕರಾರು ಪತ್ರ ಎಂದು ನಮೂದಿಸಿರುವುದಿಲ್ಲ ಅಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ತುಂಬಾ ದಿನಗಳು ಆಗಿರುವ ಕಾರಣ ನೆನಪಿಲ್ಲ ಎಂದು ನುಡಿಯುತ್ತಾರೆ. ಪ್ರಮಾಣಪತ್ರಕ್ಕೂ ಕರಾರು ಪತ್ರಕ್ಕೂ ವ್ಯತ್ಯಾಸ ಇದೆ ಅಂದರೆ, ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಿಪಿ-1 ಕ್ಕೆ ನಾನು ಸಹಿ ಮಾಡಿಲ್ಲ ಅಂದರೆ ಸರಿ. ನಿಪಿ-1 ರ ಒಕ್ಕಣೆಯನ್ನು ನಾನು ಮತ್ತು ಪ್ರತಿವಾದಿ ಇಬ್ಬರೂ ಸೇರಿ ಕಡೂರಿನ ತಾಲ್ಲೂಕು ಕಛೇರಿಯ ಮುಂದೆ ಬೆರಳಚ್ಚುಗಾರರ ಬಳಿ ಮಾಡಿಸಿರುತ್ತೇವೆ. ಬೆರಳಚ್ಚುಗಾರರು ಯಾರು ಎಂದು ನೆನಪಿಲ್ಲ. ನಿಪಿ-1 ರಲ್ಲಿ ನಮೂದಿಸಿರುವ ಆಸ್ತಿಯ ಆಗಿನ ಸಬ್ ರಿಜಿಸ್ಟ್ರಾರ್ ಮೌಲ್ಯ ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ.

ನಿಪಿ-1 ಕ್ಕೆ ಪ್ರತಿವಾದಿ ಮತ್ತು ತಿಮ್ಮಪ್ಪ ಸಹಿ ಮಾಡಿದ್ದಾರೆ. ಅವರು ಎಷ್ಟು ಸಹಿಗಳನ್ನು ಮಾಡಿದ್ದಾರೆ ಎಂದು ಕೇಳಲಾದ ಪ್ರಶ್ನೆಗೆ, ಸಾಕ್ಷಿಯು ತುಂಬಾ ದಿನಗಳಾದ ಕಾರಣ ನೆನಪಿಲ್ಲ ಎಂದು ನುಡಿಯುತ್ತಾರೆ. ಯಾವುದೇ ಒಂದು ಕರಾರು ಆಗಬೇಕಾದರೆ ಇಬ್ಬರೂ ಪಕ್ಷಗಾರರ ಸಹಿ ಇರಬೇಕು, ಆದ್ದರಿಂದ ನಿಪಿ-1 ಕರಾರು ಪತ್ರವಲ್ಲ ಅಂದರೆ ಸರಿಯಲ್ಲ. ನಿಪಿ-1 ನ್ನು ದಾವೆಗಾಗಿ ನಾನೇ ಸೃಷ್ಟಿಸಿದ್ದೇನೆ ಅಂದರೆ ಸರಿಯಲ್ಲ. 1988 ರಿಂದ ಇಲ್ಲಿಯವರೆಗು ಯಾವುದೇ ನೋಟೀಸು ನೀಡಿಲ್ಲ ಅಂದರೆ ಸರಿಯಲ್ಲ. ನೋಟೀಸನ್ನು ನೀಡಿರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಪ್ರತಿವಾದಿಗೆ ನೋಟೀಸನ್ನು

ನೀಡಿರುವ ದಿನಾಂಕ ನೆನಪಿಲ್ಲ. ಪ್ರತಿವಾದಿಯ ಜಮೀನಿನ ಸರ್ವೇನಂಬರ್.41 ಆಗಿರುತ್ತದೆ. ಸದರಿ ಆಸ್ತಿಯು ಪ್ರತಿವಾದಿಗೆ ಹೇಗೆ ಬಂದಿದೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಯು ನಿಪಿ-1 ನ್ನು ಬರೆದುಕೊಟ್ಟಿರುವುದಿಲ್ಲ ಅಂದರೆ ಸರಿಯಲ್ಲ. ದಾವಾ ಆಸ್ತಿಗೆ ಪ್ರತಿವಾದಿಯೇ ಕಂದಾಯ ಪಾವತಿಸುತ್ತಾ ಬಂದಿದ್ದಾರೆ ಅಂದರೆ ಸರಿ. ದಾವಾ ಆಸ್ತಿ ಖಾತೆ ಪ್ರತಿವಾದಿ ಹೆಸರಿಗೆ ಯಾವಾಗ ಬಂದಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಖಾತೆ ಈಗ ಪ್ರತಿವಾದಿ ಹೆಸರಿನಲ್ಲಿದೆ. ದಾವಾ ಆಸ್ತಿಯ ಖಾತೆ ಈಗ ಪ್ರತಿವಾದಿಯ ಮಗನ ಹೆಸರಿನಲ್ಲಿದೆ ಅಂದರೆ ಸಾಕ್ಷಿಯು ನಾವು ಬರೆಸಿಕೊಂಡಾಗ ಪ್ರತಿವಾದಿಯ ಹೆಸರಿನಲ್ಲಿತ್ತು ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ಪ್ರತಿವಾದಿಯ ಮಗ ಸ್ವಾಧೀನದಲ್ಲಿ ಇದ್ದಾರೆ ಅಂದರೆ, ಸಾಕ್ಷಿಯು 2 ಎಕರೆ 19 ಗುಂಟೆಯಲ್ಲಿ ಪ್ರತಿವಾದಿ ಸ್ವಾಧೀನದಲ್ಲಿದ್ದು, 1 ಎಕರೆಯಲ್ಲಿ ನಾನು ಸ್ವಾಧೀನದಲ್ಲಿ ಇದ್ದೇನೆ ಎಂದು ನುಡಿಯುತ್ತಾರೆ.

ಆರ್.ಎ.51/2014 ರಲ್ಲಿ ಈ ದಾವಾ ಆಸ್ತಿಯ ಸ್ವಾಧೀನದಾರರು ಮತ್ತು ಮಾಲೀಕರು ಪ್ರತಿವಾದಿಯೇ ಆಗಿರುತ್ತಾರೆ ಎಂದು ನಿಡಿ-1 ರಂತೆ ತೀರ್ಪು ಬಂದಿರುತ್ತದೆ ಅಂದರೆ, ಸಾಕ್ಷಿಯು ಸದರಿ ತೀರ್ಪಿನ ವಿರುದ್ಧ ನಾವು ಮಾನ್ಯ ಉಚ್ಛ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿದ್ದೇವೆ ಎಂದು ನುಡಿಯುತ್ತಾರೆ. ಮೇಲ್ಮನವಿಯನ್ನು ಸಲ್ಲಿಸಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ದಾವಾ ಆಸ್ತಿಯು ಎಷ್ಟಕ್ಕೆ ವ್ಯಾಪಾರವಾಗಿತ್ತು ಅಂದರೆ, ಸಾಕ್ಷಿಯು ರೂ.3,500/-ಗಳಿಗೆ ಆಗಿತ್ತು ಎಂದು ನುಡಿಯುತ್ತಾರೆ. ಸದರಿ ರೂ.3,500/-ಗಳನ್ನು ಯಾವ ಮುಖ ಬೆಲೆಯ ನೋಟುಗಳ ಮುಖಾಂತರ ನೀಡಿದ್ದೇನೆ ಎಂದು ಈಗ ನೆನಪಿರುವುದಿಲ್ಲ. ನಿಪಿ-1 ಕ್ಕೆ ಪ್ರತಿವಾದಿ ಮತ್ತು ತಿಮ್ಮಪ್ಪ ರವರನ್ನು ಹೊರತುಪಡಿಸಿ ಬೇರೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಪಿ-1 ನೊಂದಣಿಯಾಗಿರುವುದಿಲ್ಲ. ನಿಪಿ-1 ದಾಖಲೆ ಮಾಡಿಸಲು ರೂ.5/- ಛಾಪಾ ಕಾಗದವನ್ನು ನಾನು ಮತ್ತು ಪ್ರತಿವಾದಿ ಒಟ್ಟಾಗಿ ತೆಗೆದುಕೊಂಡಿರುತ್ತೇವೆ. ಸದರಿ ಛಾಪಾ ಕಾಗದವನ್ನು ಖರೀದಿಸಿರುವ ದಿಃ13.07.1988 ಆಗಿರುತ್ತದೆ. ಛಾಪಾ ಕಾಗದವನ್ನು ಖರೀದಿಸಿದ ದಿನವೇ ನಿಪಿ-1 ರ ದಾಖಲೆಯನ್ನು ಬರೆಸಿರುತ್ತೇವೆ. ದಾವಾ ಆಸ್ತಿಯಲ್ಲಿ ನಾನು ಎಂದಿಗೂ ಸ್ವಾಧೀನದಲ್ಲಿ ಇಲ್ಲ ಅಂದರೆ ಸರಿಯಲ್ಲ. ಪ್ರತಿವಾದಿಯ ಮಗ ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿರುವ ಕಾರಣ ದಾವಾ ಆಸ್ತಿಯ ಖಾತೆಗೆ ಪ್ರತಿವಾದಿ ಹೆಸರಿನಲ್ಲಿದೆ ಅಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ.118/2011 ರ ತೀರ್ಪನ್ನು ಆರ್.ಎ.51/2014 ರಲ್ಲಿ

ಪಿ.ಡಬ್ಲ್ಯು:1

ತಳ್ಳಿ ಹಾಕಲಾಗಿರುತ್ತದೆ ಅಂದರೆ ಸರಿಯಲ್ಲ. 1988 ನೇ ಸಾಲಿನಿಂದ ದಿಃ09-09-2014 ರವರೆಗೆ ಪ್ರತಿವಾದಿಗೆ ಯಾವುದೇ ನೋಟೀಸನ್ನು ನೀಡಿಲ್ಲ ಅಂದರೆ ಸರಿಯಲ್ಲ. ಸದರಿ ಅವಧಿಯಲ್ಲಿ ಪ್ರತಿವಾದಿ ವಿರುದ್ಧ ಯಾವುದೇ ದಾವೆ ದಾಖಲು ಮಾಡಿಲ್ಲ ಅಂದರೆ ಸರಿ. ನಿಪಿ-1 ರಲ್ಲಿರುವ ಸಹಿ ಪ್ರತಿವಾದಿಗೆ ಸಂಬಂಧಿಸಿದ್ದಲ್ಲ ಮತ್ತು ನಿಪಿ-1 ನ್ನು ಪ್ರತಿವಾದಿ ಬರೆದುಕೊಟ್ಟಿಲ್ಲ ಅಂದರೆ ಸರಿಯಲ್ಲ. ನಿಪಿ-1 ಕ್ಕೆ ದಿಃ13.07.1988 ರಂದು ಪ್ರತಿವಾದಿ ಸಹಿ ಮಾಡಿದ ನಂತರ ತಿಮ್ಮಯ್ಯ ಎಂಬುವವರು ಸಹಿ ಮಾಡಿರುತ್ತಾರೆ. ನಿಪಿ-1 ಕ್ಕೆ ಸದರಿ ತಿಮ್ಮಯ್ಯ ಮತ್ತು ಪ್ರತಿವಾದಿ ಹೊರತುಪಡಿಸಿ ಬೇರೆ ಯಾರೂ ಸಹಿ ಮಾಡಿಲ್ಲ ಅಂದರೆ ಸರಿ. ನಿಪಿ-8 ರಿಂದ 13 ರ ಛಾಯಾಚಿತ್ರಗಳನ್ನು ಪ್ರತಿವಾದಿಯ ಜಮೀನಿನಲ್ಲಿ ನಿಂತುಕೊಂಡು ತೆಗೆಸಿ ಹಾಜರುಪಡಿಸಿದ್ದೇನೆ ಅಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಪ್ರತಿವಾದಿಯೇ ಸ್ವಾಧೀನದಲ್ಲಿದ್ದಾರೆ ಅಂದರೆ ಸರಿಯಲ್ಲ. ದಾವಾ ಆಸ್ತಿಯ ಪಶ್ಚಿಮಕ್ಕೆಃಕಟ್ಟೆ, ಉತ್ತರಕ್ಕೆಃ ಪ್ರತಿವಾದಿಯ ಉಳಿಕೆ ಜಮೀನು, ದಕ್ಷಿಣಕ್ಕೆ ಮತ್ತು ಪೂರ್ವಕ್ಕೆಃರಸ್ತೆ ಇರುತ್ತದೆ. ದಾವಾ ಆಸ್ತಿಯನ್ನು ಮಾರಾಟ ಮಾಡುವ ಉದ್ದೇಶ ಪ್ರತಿವಾದಿಗೆ ಇರಲಿಲ್ಲ ಮತ್ತು ಯಾವತ್ತೂ ನಿಪಿ-1 ರ ದಾಖಲೆಯನ್ನು ಬರೆದುಕೊಟ್ಟಿರುವುದಿಲ್ಲ ಅಂದರೆ ಸರಿಯಲ್ಲ. ನಿಪಿ-1 ದಾಖಲೆಯನ್ನು ರೂ..2/-ನ ಒಂದು ಛಾಪಾ ಕಾಗದ ಮತ್ತು ರೂ.3/- ನ ಛಾಪಾ ಕಾಗದದ ಮೇಲೆ ಬರೆಯಲಾಗಿರುತ್ತದೆ.

ತುಂಡು ಭೂಮಿ ಕಾಯ್ದೆ ರದ್ದಾದ ಮೇಲೆ ದಾವಾ ಆಸ್ತಿಯನ್ನು ಬರೆದುಕೊಡಿ ಎಂದು ಪ್ರತಿವಾದಿಯನ್ನು ಕೇಳಿರುವುದಿಲ್ಲ ಅಂದರೆ ಸರಿಯಲ್ಲ. ಯಾವಾಗ ಕೇಳಿದ್ದೇನೆ ಎಂದು ನೆನಪಿರುವುದಿಲ್ಲ. ನಿಪಿ-1(ಎ) ಮತ್ತು ನಿಪಿ-1(ಬಿ) ಸಹಿಗಳನ್ನು ಪ್ರತಿವಾದಿಗೆ ಸಂಬಂಧಿಸಿದವುಗಳಲ್ಲ ಅಂದರೆ ಸರಿಯಲ್ಲ. ನಿಪಿ-1 ಆಗುವ ಕಾಲಕ್ಕೆ ನಿಪಿ-1 ಆಗುವ ಕಾಲಕ್ಕೆ ದಾವಾ ಆಸ್ತಿಗೆ ರೂ.5/- ಗಿಂತ ಹೆಚ್ಚು ಸ್ಟಾಂಪ್ ಡ್ಯೂಟಿ ಇತ್ತು ಅಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ನಿಪಿ-1 ನ್ನು ಹೊರತುಪಡಿಸಿ ನನ್ನ ಹೆಸರಿನಲ್ಲಿ ಯಾವುದೇ ದಾಖಲೆ ಇಲ್ಲ ಅಂದರೆ ಸರಿ. ಕಂದಾಯ ಇಲಾಖೆಯವರು ಯಾರು ಸ್ವಾಧೀನದಲ್ಲಿದಲ್ಲಿ ಇರುತ್ತಾರೋ ಅವರ ಬಳಿಯಿಂದ ಕಂದಾಯ ಪಡೆದುಕೊಂಡಿರುತ್ತಾರೆ ಅಂದರೆ ಸರಿಯಲ್ಲ.

ಪ್ರತಿವಾದಿಯ ಆಸ್ತಿಯನ್ನು ಕಬಳಿಸುವ ಸಲುವಾಗಿ ನಿಪಿ-1 ಸೃಷ್ಠಿಸಿ ಸುಳ್ಳು ದಾವೆ ದಾಖಲು ಮಾಡಿದ್ದೇನೆ ಅಂದರೆ ಸರಿಯಲ್ಲ. ಇಂದಿಗೂ ಸಹ 3 ಎಕರೆ 19 ಗುಂಟೆಯಲ್ಲಿ ಪ್ರತಿವಾದಿ ಸ್ವಾಧೀನದಲ್ಲಿದ್ದಾರೆ ಅಂದರೆ ಸರಿಯಲ್ಲ. ದಾವೆಯಲ್ಲಿ ಕೇಳಿರುವ ಪರಿಹಾರವನ್ನು ಪಡೆಯಲು ನಾನು ಅರ್ಹನಲ್ಲ ಅಂದರೆ ಸರಿಯಲ್ಲ. ನಿಡಿ-7 ರ ಪ್ರಕಾರ ಆರ್.ಎ.58/1970 ರ ನ್ಯಾಯಾಲಯದ ಆದೇಶದ ಮೂಲಕ ದಾವಾ ಆಸ್ತಿ ಪ್ರತಿವಾದಿಯ ಸ್ವಾಧೀನಕ್ಕೆ ಬಂದಿರುತ್ತದೆ ಅಂದರೆ ಗೊತ್ತಿಲ್ಲ. ನಿಡಿ-11 ರ ಪ್ರಕಾರ ಪ್ರತಿವಾದಿಯೇ ಇಂದಿಗೂ ಸಹ ದಾವಾ ಆಸ್ತಿಗೆ ಕಂದಾಯ ಪಾವತಿಸುತ್ತಾ ಬಂದಿದ್ದಾರೆ ಅಂದರೆ ಇರಬಹುದು.

**ಮರು ವಿಚಾರಣೆಃ ಇರುವುದಿಲ್ಲ.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ದೀಪು ಎಂ.ಟಿ.)
3 ನೇ.ಹೆ.ದಿ.ನ್ಯಾ.& ಪ್ರಃದಃನ್ಯಾಃದಂ.,ರವರು,
ಕಡೂರು.